ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಪೈಕಿ ಗ್ರಾಮ ಕೈಗಾರಿಕೆಗಳೆಷ್ಟು? ಮತ್ತು ಯಂತ್ರ ಕೈಗಾರಿಕೆಗಳೆಷ್ಟು ?

ಶ್ರೀ ಟಿ. ಸಿದ್ದಲಿಂಗಯ್ಯ.—ಎಲ್ಲಾ ನಮೂನೆಯ ಕೈಗಾರಿಕೆಗಳೂ ಸೇರಿಕೊಂಡು 2,838 ಇರುತ್ತವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ವಿಶ್ವೇಶ್ವರಯ್ಯ ಯೋಜನೆಯನ್ನು ಇನ್ನು 2 ವರ್ಷಗಳೊಳಗಾಗಿ ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಆ ಉದ್ದೇಶವನ್ನಿಟ್ಟುಕೊಂಡೇ ಈ ಮೇಜರ್ ಇಂಡಸ್ಟ್ರೀಸ್ ಕೆಲಸ ಮಾಡಿಸುತ್ತಿದ್ದೇವೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುನೂಚಿತ ಜಾತಿಗಳು).—ಈ ಯೋಜನೆಗೆ ಏನೇ ಅಡಚಣೆಗಳು ಬಂದರೂ ಅವುಗಳನ್ನು ತಡೆಗಟ್ಟತಕ್ಕ ಬಗ್ಗೆ ತಕ್ಕ ನಿಗಾ ಇಡಲು ಮತ್ತು ಅವುಗಳನ್ನು ಸರಿಯಾಗಿ ನಿರ್ವಹಿಸಿಕೊಂಡುಬರಲು ತಮಗೆ ಉದ್ದೇಶವಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅದಕ್ಕಾಗಿಯೇ ಈಗ ನುಮಾರು ನಾಲ್ಕನೇ ಒಂದು ಪಾಲಿನ ಪ್ರದೇಶದಲ್ಲಿ ಅದನ್ನು ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಕೆ. ಪ್ರಭಾಕರ್.—ವಿಶ್ವೇಶ್ವರಯ್ಯನವರ ಕೈಗಾರಿಕಾ ಯೋಜನೆಯಲ್ಲಿ ಅದು ಇನ್ನೂ ಹೆಚ್ಚು ಸಮರ್ಪಕವಾಗಿ ನಡೆಯುವಂತೆ ಮಾಡಲು ಏನು ಅಡಚಣೆಗಳಿವೆಯೆಂಬುದನ್ನು ಕಂಡುಹಿಡಿದು, ಅದಕ್ಕೆ ನಿಗಾ ಕೊಟ್ಟು ಸರಿಪಡಿಸುವುದು ಸರ್ಕಾರದವರ ಉದ್ದೇಶವಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇದೆ. ಪ್ರತಿದಿವಸವೂ ಸಹ ಅದೇಪರೀಕ್ಷೆ ನಡೆಸುತ್ತಿದ್ದೇವೆ. ಅಲ್ಲಲ್ಲಿ improvements ಕೂಡ ಮಾಡುತ್ತಿದ್ದೇವೆ.

ಶ್ರೀ ಕೆ. ಪ್ರಭಾಕರ್.—ಎ. ಜಿ. ಡಿ. ಕೈಗಾರಿಕೆಗಳನ್ನು ಸಣ್ಣ ಪುಟ್ಟ ಸೊಸೈಟಿಗಳಾಗಿ ಏರ್ಪಡಿಸಿ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ.—ಎಲ್ಲಾ ಜನರೂ ಸಹಕರಿಸಿ ಗ್ರಾಮೋದ್ಯೋಗಗಳನ್ನು ಹೆಚ್ಚಿಸಬೇಕೆಂದೇ ಇದನ್ನು ಮಾಡಿದೆ.

ಶ್ರೀ ಬಿ. ವೆಂ. ಬೈರೇಗೌಡ—(ಬೆಂಗಳೂರು ಉತ್ತರ ತಾಲ್ಲೂಕು).—ಈಗ ಅಲ್ಲಿ ಸಂಗ್ರಹವಾಗಿರುವ ಹಣ ಸರ್ಕಾರದ್ದೇ ಅಥವಾ ಸಾರ್ವಜನಿಕರದೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಂಕಿಗಳನ್ನು ಕೊಟ್ಟಿದೆ. ಸರ್ಕಾರದವರು ಎರಡು ಲಕ್ಷ ಹಾಕಿದ್ದಾರೆ; ಜನರು ಮೂರುಲಕ್ಷ ಹಾಕಿದ್ದಾರೆ.

ಶ್ರೀ ಬಿ. ವೆಂ. ಬೈರೇಗೌಡ. ಇದು ವಾಪಸು ಕೊಡುವ ಮೊಬಲಗೇ ಅಥವಾ ಚಂದಾ ಮೊಬಲಗೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅದೆಲ್ಲಾ ಷೇರು ಮೊಬಲಗು.

Sri R ANANTARAMAN (Chamarajpet).—Are the Government contemplating to extend the scheme to other districts ?

ಶ್ರೀ ಟಿ. ಸಿದ್ದಲಿಂಗಯ್ಯ.— ಮಂಡ್ಯ ಡಿಸ್ಟ್ರಿಕ್ಟ್‌ಗೆ ಈಗಾಗಲೇ extend ಮಾಡಿದೆ. ಅಲ್ಲಿ ಪರೀಕ್ಷೆಮಾಡಿ ಫಲಾಫಲಗಳನ್ನು ನೋಡಿಕೊಂಡು ಬೇರೆ ಕಡೆಗೆ extend ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಈ ಗ್ರಾಮಕೈಗಾರಿಕೆಗಳಿಂದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಪ್ರಯೋಜನವಾಗಿವೆ ಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಲ್ಲಿ 60 ಲಕ್ಷ ರೂಪಾಯಿಗಳ ಕೆಲಸ ನಡೆದು ಅದರ ಲಾಭವನ್ನು ಜನರು ಪಡೆದಿದ್ದಾರೆಂದು ಗೊತ್ತಾಗಿದೆ.

ಶ್ರೀ ಎಸ್. ಸಿದ್ದಪ್ಪ.—ರೈತರು ಕೊಡತಕ್ಕ ಶುಲ್ಕದಿಂದ ಅಲ್ಲಿನ ಗ್ರಾಮಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಆ ಪ್ರಾಂತದ ಜನರಿಗೆ ಅನುಕೂಲ ಮಾಡಬೇಕೆಂದು ತಾನೆ ನಡೆಸುತ್ತಿರುವುದು ?

ಶ್ರೀ ಟಿ. ಸಿದ್ದಲಿಂಗಯ್ಯ.—ಶುಲ್ಕ ಎಂದು ತೆಗೆದುಕೊಳ್ಳುತ್ತಿಲ್ಲ. ಗ್ರಾಮ ಕೈಗಾರಿಕೆಗಳನ್ನು ಆಯಾ ಗ್ರಾಮದ ಜನರೇ ತಾವು ತಾವೇ ಸೇರಿಕೊಂಡು ನಡೆಸಬೇಕೆಂಬುದೆ ಉದ್ದೇಶ.

Supply of Electricity to Gundlupet Taluk.

Q.—464. **Sri H. K. SHIVARUDRAPPA** (Gundlupet-Heggaddevankote).—

Will the Government be pleased to state:—

(*a*) the number of estimates that have been received by them to provide electricity to Gundlupet Taluk;

(*b*) of them, the number that have been sanctioned and their details;

(*c*) whether they intend to supply electricity to Therkanambi and Hangala during this year itself ?

A.—**Sri T. SIDDALINGAIYA** (Minister for Industries).—

(*a*) Six for electrification (Kaballi, Madapatna, Somanahalli, Thoravalli Annur and Kodahalli) and six for power supply to I.P. sets (one at Hirekatte, one at Gundlupet, one at Begur, and three near Halahalli).

(*b*) (i) One of 10 H.P. at Hirekatte Rs. 6,010. Work sanctioned and in progress.

(ii) One of 5 H.P. at Gundlupet Rs. 6,204 Work sanctioned and in progress.

(iii) One of 5 H.P. at Begur Rs. 4,385. Work sanctioned and in progress.

(*c*) Not likely.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತೆರಕಣಾಂಬಿ, ಹಂಗಳ, ಈ ಗ್ರಾಮಗಳಿಗೆ ದೀಪವನ್ನು ಒದಗಿಸುವ ಬಗ್ಗೆ ಎಸ್ಟಿಮೇಟ್ ಬಂದಿದೆಯೇ ?

*Sri T. SIDDALINGAIYA.—It is not necessary to answer that question; it is in writing.

ಶ್ರೀ ಎಚ್. ಕೆ. ಶಿವರುದ್ರಪ್ಪ.—It has not been answered. ತೆರಕಣಾಂಬಿ ಮತ್ತು ಹಂಗಳ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಎಸ್ಟಿಮೇಟ್ ಬಂದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಒಂದಿರ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ದೀಪ ಒದಗಿಸುವ ಬಗ್ಗೆ ಕಬ್ಬಹಳ್ಳಿ, ಮಾದಾಪಟ್ಟಣ ಮುಂತಾದ ಊರುಗಳಿಗೆ ಬೇರೆ ಬೇರೆ ಎಸ್ಟಿಮೇಟ್‌ಗಳಾಗಿವೆಯೇ ಅಥವಾ ಎಲ್ಲವೂ ಒಂದೇ ಎಸ್ಟಿಮೇಟಿನಲ್ಲಿ ಸೇರಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ—ನೋಟೀಸ್ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಣ್ಣೂರು, ಕೋಡಹಳ್ಳಿಗೆ ಅಂದಾಜು ತಯಾರಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ನೋಟೀಸ್ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಒಂದು ಅಶ್ವಶಕ್ತಿ ಯುಳ್ಳ ನಿರಾವರಿ ಪಂಪಿಗೆ ಎಷ್ಟು ಖರ್ಚುಮಾಡಬಹುದೆಂದಿವೆ ?

Mr. SPEAKER.—That need not be answered. That is a very elementary question.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದಲ್ಲದೆ, ಈ ವರ್ಷ ಅರಹಳ್ಳಿಗೆ ಕಂಪು ಸುಟ್ಟುಗಳನ್ನು ಮಂಜೂರುಮಾಡಲಿಲ್ಲವೆಂದು ಹೇಳಿದ್ದೀರಿ ಏಕೆ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅದಕ್ಕೆ ಬೇಕಾದ ಹಣ ಇಲ್ಲ. ಆದ್ದರಿಂದ ಸ್ಯಾಂಕ್ಷನ್ ಆಗಿಲ್ಲ.

Supply of Electricity to Halepaiya, Hosapalya and Annapura Villages.

Q.—572. T. G. THIMME GOWDA (Tiptur).—

Will the Government be pleased to state :—

(*a*) the number of times survey has been conducted for the supply of electricity to the villages of Halepaiya, Hosapalya and Annapura of Tiptur Taluk;

(*b*) whether it has come to their notice that the people of these villages are urging upon the Government for the last 8-10 years in the matter of supplying electric light and power to assist their handloom industry;

(*c*) whether they are aware that though there are more than thousand handlooms and a population nearly exceeding 4,000 in these villages, there is no scope for the development of the Industry for want of electricity;

(*d*) whether the Government will consider the question of immediately helping them by providing funds in the current year's budget itself for the supply of electricity to these villages ?

A.—Sri T. SIDDALINGAIYA (Minister for Industries).—

(*a*) Survey of these places were conducted early in the year 1950 and estimates for power supply to these places have been prepared.

(*b*) A representation for power supply to these villages was first received during April 1946 and this could not be considered then due to the limited station capacity at Tiptur.

(*c*) The Government is aware of this situation and hence a detailed survey of the place and estimates therefor were prepared.

(*d*) An estimate for Rs. 2,50,000 has been prepared and the same will be taken up for consideration.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ವಿದ್ಯುಚ್ಛಕ್ತಿ ಸ್ಟೇಷನ್ನಿನಿಂದ ಅಣ್ಣಾಪುರ, ಹಳೆಪುರ, ಹೊಸಪುರ ಈ ಗ್ರಾಮಗಳಿಗೆ ಎಷ್ಟು ಫಾನಲೆಯಾಗುತ್ತದೆ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಎಷ್ಟು ಮೈಲಿಯೆಂದು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—2 ಲಕ್ಷದ 50 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ತಯಾರಾಗಿದೆಯೆಂದು ಹೇಳಿದ್ದೀರಿ. ಈಚೆಗೆ 80,000 ರೂಪಾಯಿಗಳಿಗೆ ರಿ-ಎಸ್ಟಿಮೇಟ್ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇರಬಹುದು. ನನ್ನ ಹತ್ತಿರ ಈಗ ಆ ರಿಕಾರ್ಡ್‌ಗಳಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಹಳ್ಳಿಗಳು ನುಮಾರು 4 ಫರ್ಲಾಂಗ್ ದೂರದಲ್ಲಿವೆ. ಅಷ್ಟು ಸಮೀಪದಲ್ಲಿರುವುದರಿಂದ ಅಲ್ಲಿಗೆ ವಿದ್ಯುಚ್ಛಕ್ತಿ ಒದಗಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯ.—ಹತ್ತಿರವಿದೆ. ಒಪ್ಪಿಕೊಳ್ಳುತ್ತೇನೆ. ಆದರೆ ರೋಡ್ ಅಲ್ಲಿರುವುದು ಸಾಲದು. ಇಲ್ಲದಿದ್ದರೆ ಸುಲಭವಾಗಿ ಹಾಕುತ್ತಿದ್ದೆವು.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಹಳ್ಳಿಗಳಲ್ಲಿ 400-500 ಕೈಮಗ್ಗಗಳಿರುವುದರಿಂದ ಈ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿಗೆ ನಿಗಾ ಕೊಡುವುದು ಸೂಕ್ತವಲ್ಲವೇ ?

Sri T. SIDDALINGAIYA—It is given in the answer that the Government are aware of this situation.

ಶ್ರೀ ಟಿ. ಜಿ. ತಿಮ್ಮೇಗೌಡ.—ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಿ ಕೊಡುವುದರಲ್ಲಿ ಯಾವ ನೀತಿಯನ್ನನುಸರಿಸುತ್ತೀರಿ ?